# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ.

**ಉಪಸ್ಥಿತರುಃ**

ಶ್ರೀ ಲಕ್ಷ್ಮೀ ನರಸಿಂಹ ಆರ್.ವಿ,
ಬಿ.ಎ.ಎಲ್., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ಜಡ್ಜ್ **ಮತ್ತು ಜೆ.ಎಂ.ಎಫ್.ಸಿ, ಸಕಲೇಶಪುರ.**

## ಸಿ.ಸಿ.ನಂ.1190/2025

| | | |
|---|---|---|
| **ಫಿರ್ಯಾದುದಾರರು** | : | ಅರಸೀಕೆರೆ ರೈಲ್ವೆ ಪೊಲೀಸ್ ಠಾಣೆ |
| | **-ವಿರುದ್ಧ -** | |
| **ಆರೋಪಿತರು** | | ಜಿತೇಂದ್ರ ಕುಮಾರ್ ಜಾವ್ಲಾ<br>ಬಿನ್ ಲೇಟ್ ಮನೋಜ್ ಜಾವ್ಲಾ,<br>ವಯಸ್ಸು 37 ವರ್ಷ,<br>ವಾಸ - ಜಾವ್ಲಾ ಭವನ್ದ ಮಂಜಾರ, ಉದ್ಯೆಪುರ ಚೋಪ್ರಾ ಪೆರುಮದರ, ರಾಮನಗರ, ನೈನಿತಾಲ್,<br>ಉತ್ತರಾಂಚಲ. |

## ದೋಷಾರೋಪಣೆ

ನಾನು **ಲಕ್ಷ್ಮೀ ನರಸಿಂಹ ಆರ್.ವಿ, ಬಿ.ಎ.ಎಲ್., ಎಲ್.ಎಲ್.ಬಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ಸಕಲೇಶಪುರ,** ಈ ಮೂಲಕ ಆರೋಪಿಯಾದ ಇವರ ಮೇಲೆ ಮಾಡಿದ ದೋಷಾರೋಪಣೆ ಏನೆಂದರೆ.

ದಿನಾಂಕ 08.02.2025 ರಂದು ಬೆಳಿಗ್ಗೆ 3.20 ಗಂಟೆಯಲ್ಲಿ ಚಾಸಾ-2 ಮತ್ತು 3 ರವರು ರೈಲುಗಾಡಿ ಸಂಖ್ಯೆ 16596 ಪಂಚ ಗಂಗಾ ಎಕ್ಸ್ ಪ್ರೆಸ್ ರೈಲು ಗಾಡಿಯ ಬೋಗಿಯ ಬರ್ತ್ ನಂ.43 ಮತ್ತು 45 ರಲ್ಲಿ ಉಡುಪಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದಾಗ ಆರೋಪಿಯಾದ ನೀವು ಚಾಸಾ-2 ಮತ್ತು 3 ರವರ ಬ್ಯಾಗ್ಗಳನ್ನು ಕಳ್ಳತನ ಮಾಡಿ ಅದರಲ್ಲಿದ್ದ ಬಂಗಾರದ ಓಲೆ ಹಾಗೂ 25,000/- ರೂ. ನಗದು ಹಣ ಹಾಗೂ ಇತರೆ ವಸ್ತುಗಳನ್ನು ಕಳ್ಳತನ ಮಾಡಿ ಇತರೆ ವಸ್ತುಗಳನ್ನು ಬ್ಯಾಗ್ ಸಮೇತ ಎಲ್ಲಿಯೋ ಬಿಸಾಡಿ ನಗದು ಹಣವನ್ನು ತನ್ನ ದುಶ್ಚಟಗಳಿಗೆ ಖರ್ಚು ಮಾಡಿಕೊಂಡು ಬಂಗಾರದ ಓಲೆಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದು, ಆ ಮೂಲಕ ಭಾರತೀಯ ರೈಲ್ವೆ ಕಾಯ್ದೆ 305(ಸಿ) ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾದವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

[ಈ ದೋಷಾರೋಪಣೆಯನ್ನು ಈ ದಿನ ದಿನಾಂಕ 22.07.2026 ರಂದು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಕಲೇಶಪುರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಸಕಲೇಶಪುರ
ಸಿ.ಸಿ.ಸಂಖ್ಯೆ 1190/2025

| | | |
|---|---|---|
| ಪಿರ್ಯಾದುದಾರರು | ಃ | ಅರಸೀಕೆರೆ ರೈಲ್ವೆ ಪೊಲೀಸ್ ಠಾಣೆ |
| | | ವಿರುದ್ಧ |
| ಆರೋಪಿ | ಃ | ಜಿತೇಂದ್ರ ಕುಮಾರ್ ಜಾವ್ಲಾ |

1. ಪ್ರಶ್ನೆ ಃ ಈಗ ನಿಮಗೆ ಕನ್ನಡದಲ್ಲಿ ಓದಿ ಹೇಳಿದ ಆಪಾದನೆಯು ಅರ್ಥವಾಯಿತೇ?
ಉತ್ತರ ಃ

2. ಪ್ರಶ್ನೆ ಃ ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?
ಉತ್ತರ ಃ

ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವಾಗಿದೆ ಎಂದು ಈ ಮೂಲಕ ಧೃಢೀಕರಿಸುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಕಲೇಶಪುರ.